Online Newspaper Clipping Service
**Dated, Saturday 07th January – 2017**

THE HINDU

**Pg.No.05**

# AYUSH doctors can now prescribe allopathic drugs 'during emergencies'

AFSHAN YASMEEN

BENGALURU: It's official. Practitioners of AYUSH (Ayurveda, Yoga, Unani, Siddha, and Homeopathy) appointed in Primary Health Centres (PHCs) in rural areas of Karnataka can practice allopathy "during emergencies".

A Government Order to this effect was issued on Thursday. With this, Karnataka has joined the list of 13 States, including Maharashtra, Tamil Nadu, Gujarat, Punjab, Uttar Pradesh, Bihar, Assam, and Uttarakhand, where integrated practise is legal.

### Objections raised

Despite objections by some groups, including the Karnataka Medical Council and Indian Medical Association, a committee, headed by the State Drugs Controller, set up by the Health Department to study the feasibility of allowing AYUSH doctors to practice allopathy, gave the go-ahead, following which the order was issued.

The committee recommended that AYUSH practitioners in PHCs should undergo a six-month crash course under senior doctors in district hospitals. The jurisdictional Deputy Commissioner-headed regulatory committees, set up under the Karnataka Private Medical Establishment Act, should certify trained AYUSH practitioners, the panel said.

**A STEP FORWARD**

- AYUSH practitioners recruited in PHCs can now take up integrated practice
- They will have to undergo a six-month crash course in district hospitals
- Move essential to curb quackery and ensure all PHCs have qualified doctors, say officials

### In preparation

"The course will include three months each of theory and practicals. The idea is to prepare them to treat communicable and non-communicable diseases in rural areas," said N.A. Magadum, president of AYUSH Federation of India's State unit, who is also a member of the committee.

He said that although the decision is to train and allow integrated practise for AYUSH practitioners who are recruited in PHCs, there is a need to allow all AYUSH practitioners to do so like in other States.

### IMA's position

This move has, however, faced stiff opposition from the State unit of the Indian Medical Association (IMA) and the Karnataka Medical Council (KMC), who fear it could "make way for quackery". KMC has written to the government seeking postponement of the implementation of the order by 15 days. "Allowing integrated practise will result in increased number of medical negligence cases. It is unfortunate that our views have not been considered," a KMC member said.

Official sources in the Health Department said the move was essential as the department had repeatedly failed to attract adequate number of MBBS graduates for its PHCs. "We already have nearly 800 AYUSH practitioners recruited against the posts of General Duty Medical Officers," a top official said.

ಕನ್ನಡಪ್ರಭ



# ಮಾನ್ಯತೆ ಗೊಂದಲ ವಿದ್ಯಾರ್ಥಿಗಳಿಗೆ ಇಕ್ಕಟ್ಟು

## ನರ್ಸಿಂಗ್ ಕಾಲೇಜು ಮಾನ್ಯತೆ ನವೀಕರಣಕ್ಕಿಲ್ಲ ಸ್ಪಷ್ಟ ಸೂಚನೆ

• **ಕನ್ನಡಪ್ರಭ ವಾರ್ತೆ ಬೆಂಗಳೂರು**

ರಾಜ್ಯದ ನರ್ಸಿಂಗ್ ಕಾಲೇಜುಗಳಲ್ಲಿನ ಸೀಟು ಹೆಚ್ಚಳ ಮತ್ತು ಮಾನ್ಯತೆ ನವೀಕರಣ ವಿಚಾರ ನರ್ಸಿಂಗ್ ಕಾಲೇಜಿನ ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಕಾಲೇಜುಗಳ ಮಾನ್ಯತೆ ನವೀಕರಣಕ್ಕೆ ಸ್ಪಷ್ಟ ಸೂಚನೆಗಳಿಲ್ಲದಿರುವುದೇ ಗೊಂದಲಗಳಿಗೆ ಎಡೆಮಾಡಿಕೊಟ್ಟಿದೆ. ಈವರೆಗೆ ಇಂಡಿಯನ್ ನರ್ಸಿಂಗ್ ಕೌನ್ಸಿಲ್(ಐಎನ್‌ಸಿ) ಕಾಲೇಜುಗಳ ಸೀಟು ಹೆಚ್ಚಳ ಮತ್ತು ಮಾನ್ಯತೆ ನೀಡುತ್ತಿತ್ತು. ಮಾನ್ಯತೆ ಪಡೆದ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಬೇರೆ ರಾಜ್ಯಗಳಿಗೆ ಹೋಗಿ ಸೇವೆ ಸಲ್ಲಿಸಬಹುದಿತ್ತು. ಆದರೆ, ಇತ್ತೀಚೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಲವಾರು ಹೈಕೋರ್ಟ್ ಆದೇಶಗಳನ್ನು ಉಲ್ಲೇಖ ಮಾಡಿ ಇನ್ನು ಮುಂದೆ ಕರ್ನಾಟಕ ನರ್ಸಿಂಗ್ ಕೌನ್ಸಿಲ್ (ಕೆಎಸ್‌ಎನ್) ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಮಾನ್ಯತೆ ನೀಡಬೇಕೆಂದು ಸೂಚನೆ ನೀಡಿದೆ.

ರಾಜ್ಯದಲ್ಲಿ 330 ನರ್ಸಿಂಗ್ ಕಾಲೇಜುಗಳಿದ್ದು ಈ ಪೈಕಿ 280 ಕಾಲೇಜುಗಳು ಸದ್ಯ ಕಾರ್ಯನಿರ್ವಹಿಸುತ್ತಿವೆ. ಬಿ.ಎಸ್ಸಿ ನರ್ಸಿಂಗ್ ಹಾಗೂ ಪೋಸ್ಟ್ ಬೇಸಿಕ್ ಬಿ.ಎಸ್ಸಿ. ನರ್ಸಿಂಗ್ ಕೋರ್ಸ್‌ನಲ್ಲಿ 35,650 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಐಎನ್‌ಸಿ ಮಾನ್ಯತೆ ನೀಡಿದ ಪಕ್ಷದಲ್ಲಿ ನರ್ಸಿಂಗ್ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಕರ್ನಾಟಕ ಹೊರತಾಗಿ ಬೇರೆ ರಾಜ್ಯಗಳಲ್ಲೂ ಪ್ರಾಕ್ಟಿಸ್ ಮಾಡಬಹುದಾಗಿದೆ. ಕೆಎಸ್‌ಎನ್ ಮಾನ್ಯತೆ ನೀಡಿದರೆ, ಕೇವಲ ಕರ್ನಾಟಕದಲ್ಲಿ ಮಾತ್ರ ಪ್ರಾಕ್ಟಿಸ್ ಮಾಡಬೇಕಾಗುತ್ತದೆ. ಇದರಿಂದ ನರ್ಸಿಂಗ್ ಕಾಲೇಜು ಆಡಳಿತ ಮಂಡಳಿಗಳು ಹಾಗೂ ವಿದ್ಯಾರ್ಥಿಗಳು ಗೊಂದಲಕ್ಕೆ ಸಿಲುಕಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಆರ್‌ಜಿಯುಎಚ್‌ಎಸ್ ಕುಲಪತಿ ಕೆ.ಎಸ್. ರವೀಂದ್ರನಾಥ್, ನರ್ಸಿಂಗ್ ಕಾಲೇಜಿಗೆ ಮಾನ್ಯತೆ ನೀಡುವ ವಿಚಾರ ಗೊಂದಲದಲ್ಲಿದೆ. ಸದ್ಯದ ಆದೇಶದ ಪ್ರಕಾರ ವಿದ್ಯಾರ್ಥಿಗಳಿಗೆ ಅನನುಕೂಲವೇ ಹೆಚ್ಚು. ವಿವಿಧ ಕೋರ್ಟ್‌ಗಳ ಆದೇಶಗಳು ವಿಭಿನ್ನವಾಗಿವೆ. ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು.

- ಈವರೆಗೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಬೇರೆ ರಾಜ್ಯಗಳಲ್ಲಿ ಸೇವೆ ಸಲ್ಲಿಸಬಹುದಿತ್ತು.
- ಈಗ ಆರೋಗ್ಯ ಇಲಾಖೆ ಇನ್ನು ಕೆಎಸ್‌ಎನ್, ಆರ್‌ಜಿಯುಎಚ್ ಎಸ್) ಮಾನ್ಯತೆ ನೀಡಬೇಕೆಂದು ಸೂಚನೆ ನೀಡಿದೆ

ಕೋಲಾರಪತ್ರಿಕೆ

Pg.No.01

# ಕೆಜಿಎಫ್ ಪೌರ ಕಾರ್ಮಿಕರಿಗಾಗಿ ಆರೋಗ್ಯ ತಪಾಸಣಾ ಶಿಬಿರ



ಕೆಜಿಎಫ್ ಜ ೬

ಸ್ಥಳೀಯ ರಾಬರ್ಟ್‌ಸನ್ ಪೇಟೆ ನಗರಸಭೆಯು ಪೌರ ಕಾರ್ಮಿಕರ ಸಲುವಾಗಿ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಕೋಲಾರದ ಆರ್.ಎಲ್. ಜಾಲಪ್ಪ ಮತ್ತು ನಾರಾಯಣ ಹೃದಂತರಾಲಂತುಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದಿತು.

ಎಲ್ಲ ರೀತಿಯ ಆರೋಗ್ಯ ತಪಾಸಣೆ, ರಕ್ತಪರೀಕ್ಷೆ, ಇಸಿಜಿ ಮತ್ತಿತರ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾಯಿತು.

ಹೆಪಟೈಟಸ್–ಬಿ ಲಸಿಕೆಯನ್ನು ಎಲ್ಲ ಪೌರಕಾರ್ಮಿಕರಿಗೂ ಉಚಿತವಾಗಿ ನೀಡಲಾಯಿತು.

ನಗರಸಭಾ ಅಧ್ಯಕ್ಷ ಬಿ.ಪಿ. ರಮೇಶ್‌ಕುಮಾರ್ ಅವರು ಈ ಶಿಬಿರವನ್ನು ಉದ್ಘಾಟಿಸಿಧರು. ಉಪಾಧ್ಯಕ್ಷೆ ಜಯಂತಿ ಶ್ರೀನಿವಾಸ್, ಮಾಜಿ ಅಧ್ಯಕ್ಷ ಕೆ.ಸಿ. ಮುರಳಿ, ಹಲವಾರು ನಗರಸಭೆ ಸದಸ್ಯರು ಉಪಸ್ಥಿತರಿದ್ದರು.

ಪೌರಾಂತಯುಕ್ತ ಆರ್. ಶ್ರೀಕಾಂತ್ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರ ಶ್ರೀಧರನ್ ಅವರು ಶಿಬಿರದ ವ್ಯವಸ್ಥೆಯನ್ನು ಮಾಡಿದ್ದರು.

## ಮತ್ತೊಂದು ಕಪ್ಪುಘಟನೆ

ಬೆಂಗಳೂರಿನ ಕಮ್ಮನಹಳ್ಳಿ ಪ್ರಕರಣದ ಬಿಸಿ ಆರುವುದಕ್ಕೂ ಮುನ್ನವೇ ಶುಕ್ರವಾರ ಬೆಳಿಗ್ಗೆ ಅರರ ಹೊತ್ತಿನಲ್ಲಿ ಒಂಟಿ ಮಹಿಳೆಯನ್ನು ಹಿಂಬಾಲಿಸಿಕೊಂಡು ಬಂದು ಚುಂಬಿಸುವ ಯತ್ನ ನಡೆದಿದೆ.

ವಾರ್ತೆ

# ಕೆಇಬಿ ನೌಕರರಿಗೆ ಹೃದಯ ತಪಾಸಣೆ

ಕೋಲಾರ

ಆರ್.ಎಲ್.ಜಾಲಪ್ಪ ನಾರಾಯಣ ಹೃದಯಾಲಯ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಎಲ್ಲಾ ನೌಕರರಿಗೂ ಉಚಿತ ಹೃದಯ ಆರೋಗ್ಯ ತಪಾಸಣಾ ಶಿಬಿರವನ್ನು ನಗರದ ಕೆ.ಇ.ಬಿ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ನಾರಾಯಣ ಹೃದಯಾಲಯದ ತಜ್ಞ ವೈದ್ಯರಿಂದ ಶಿಬಿರದಲ್ಲಿ ಬೆಸ್ಕಾಂ ಇಲಾಖೆಯ ನೌಕರರಿಗೆ ಉಚಿತವಾಗಿ ಇಸಿಜಿ, ಎಕೋ, ಬಿ.ಪಿ, ವೈದ್ಯರ ಸಂದರ್ಶನ ನಡೆಸಲಾಯಿತು. ಈ ಸಂದರ್ಭದಲ್ಲಿ ನಾರಾಯಣ ಹೃದಯಾಲಯದ ವೈದ್ಯರಾದ ಡಾ.ಸೋನಿಯಾ, ಸಾರ್ವಜನಿಕ ಸಂಪರ್ಕಾಧಿಕಾರಿ ಆಂಜನೇಯರೆಡ್ಡಿ, ಸಿಬ್ಬಂದಿ ವರ್ಗ ಮಹಮದ್ ಶಫೀ, ಐಶ್ವರ್ಯ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಅಧ್ಯಕ್ಷ ಎಂ.ವೆಂಕಟೇಶ್‌ಉಪಸ್ಥಿತರಿದ್ದರು.